**Government of Karnataka**
**Deposition Sheet (R.P.N.57) Form 4 Criminal**

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ದೇವದುರ್ಗ
ಸಿ.ಸಿ. ನಂ. 446/2023

| | | |
|---|---|---|
| ಹೆಸರು | ಹೊಸಕೇರಪ್ಪ ಕೆ | ಪಿ. ಡಬ್ಲ್ಯೂ ಃ ೮ |
| ತಂದೆಯ– ಹೆಸರು | ಬಸಪ್ಪ ಕೆ | ಸಿ. ಡಬ್ಲ್ಯೂ ಃ ೧೧ |
| ವಯಸ್ಸು | 52 ವರ್ಷ | |
| ಉದ್ಯೋಗ | ಪಿ ಐ ಲಿಂಗಸೂಗೂರು ಪೋಲಿಸ್ ಠಾಣಾ | **ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ** |
| ವಾಸ | ಲಿಂಗಸೂಗೂರು | ದಿಃ 04-08-2026 |

**ಮುಖ್ಯ ವಿಚಾರಣೆಃ** ಮಾನ್ಯ ಎ.ಪಿ.ಪಿ ರವರಿಂದಃ

ನಾನು ದೇವದುರ್ಗ ಪೋಲೀಸ್ ಠಾಣೆಯಲ್ಲಿ 25-07-2022 ರಿಂದ 28-09-2023 ವರೆಗೆ ಪಿ ಐ ಎಂದು ಪೋಲೀಸ್ ಠಾಣೆ ದೆವದುರ್ಗದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ: 03-03-2023 ರಂದು, ಬೆಳಿಗ್ಗೆ 11-00 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಹಾಜರಾಗಿ ಗಣಿಕೀಕೃತ ದೂರನ್ನು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಠಾಣೆ ಗುನ್ನೆ ನಂಬರ್ ನಾನು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ 43/2023 ರಂತೆ ಭಾ ದಂ ಸಂ ಕಲಂ 380, 457, 511 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿರುತ್ತೇನೆ. ಸಾಕ್ಷಿ ಎಫ್ ಐ ಆರ್ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ದೂರನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ದೂರನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದ್ದು ಸಾಕ್ಷಿದದಾರರ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಮಧ್ಯಾಹ್ನ 2-30 ಗಂಟೆಯಿಂದ 3-30 ಗಂಟೆಯವರೆಗೆ ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿದಾರರು ಸ್ಥಳ ಪಂಚನಾಮೆ ವರದಿಯನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿ ಪಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 2(ಸಿ) ಎಂದು ಗುರುತಿಸಲಾಯಿತು. ಆರೋಪಿ ಪತ್ತೆ ಕುರಿತು ಸಿಬ್ಬಂದಿಯವರನ್ನು ನೇಮಕ ಮಾಡಿದ್ದು ದಿನಾಂಕ: 08-03-2023 ರಂದು ದೇವದುರ್ಗ ಪಟ್ಟಣದ ಟಿಪ್ಪು ಸುಲ್ತಾನ ಕಮಾನ ಹತ್ತಿರ ಆರೋಪಿ ಅನುಮಾನಸ್ಪದವಾಗಿ ಓಡಾಡುತ್ತಿರುವುದನ್ನು ಗಮನಿಸಿ

ಸಿಬ್ಬಂದಿಯವರು ಆತನನ್ನು ಹಿಡಿದುಕೊಂಡು ಬಂದು ಠಾಣೆಗೆ ಹಾಜರುಪಡಿಸಿರುತ್ತಾರೆ. ಆತನನ್ನು ವಿಚಾರಣೆ ಮಾಡಿದಾಗ ತಪ್ಪೊಪ್ಪಿಗೆಯನ್ನು ಒಪ್ಪಿಕೊಂಡಿರುತ್ತಾನೆ ಆತನ ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರು ಸ್ವ ಖುಷಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ನಿ ಪಿ 4 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತನು ಕೃತ್ಯದ ಸ್ಥಳಕ್ಕೆ ಕರೆದುಕೊಂಡು ಹೋದರೆ ತೋರಿಸುತ್ತೇನೆಂದು ದೇವದುರ್ಗ ಬಾಲಕೀಯರ ಮೆಟ್ರಿಕ್ ನಂತರ ವಸತಿಯನಿಲಯದ ಹತ್ತಿರ ಕರೆದುಕೊಂಡು ಹೋಗಿ ತೋರಿಸಿರುತ್ತಾನೆ.

ನಂತರ ಅದೇ ದಿನಾಂಕದಂದು ಆರೋಪಿತನು ಕೃತ್ಯಕ್ಕೆ ಬಳಿಸಿದ ಒಂದು ಕಬ್ಬಿಣದ ರಾಡ ನ್ನು ಸ್ವ ಖುಷಿ ಹೇಳಿಕೆ ಆಧಾರದ ಮೇರೆಗೆ ಹಾಜರುಪಡಿಸಿದ್ದು ಅದನ್ನು ಪಂಚರಾದ ಚಾಸಾ-4 ಮತ್ತು 5 ಇವರ ಸಮಕ್ಷಮ ಪೋಲಿಸ್ ಠಾಣೆಯಲ್ಲಿ ಕಬ್ಬಿಣದ ರಾಡ ಪಂಚನಾಮೆ ಬರೆದು ಜಪ್ತಿ ಮಾಡಿಕೊಂಡಿರುತ್ತೇನೆ. ಸಾಕ್ಷಿದಾರರು ಕಬ್ಬಿಣದ ರಾಡ ಪಂಚನಾಮೆ ವರದಿಯನ್ನು ನೋಡಿ ಗುರುತಿಸಿದ್ದು ನಿ ಪಿ 5 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಸಿದ ಛಾಯಾ ಚಿತ್ರವನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ನಿ ಪಿ 6 ಮತ್ತು 6(ಎ) ಎಂದು ಗುರುತಿಸಲಾಯಿತು. ನಂತರ ಸ್ವ ಖುಷಿ ಆಧರದ ಹೇಳಿಕೆಯ ಆಧಾರದ ಮೇರೆಗೆ ಆರೋಪಿ ಕೃತ್ಯ ಎಸಗಿದ ಸ್ಥಳ ತೋರಿಸುವುದಾಗಿ ಕರೆದುಕೊಂಡು ಹೋಗಿರುತ್ತಾನೆ. ನಂತರ ಆರೋಪಿತನು ಮೇಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ದೇವದುರ್ಗ ದ ಮುಖ್ಯ ದ್ವಾರದ ಬಾಗಿಲು ತೆರೆದು ತೋರಿಸಿರುತ್ತಾನೆ. ಪಂಚರಾದ ಚಾಸಾ-4 ಮತ್ತು 5 ಇವರ ಸಮಕ್ಷಮ ಕೃತ್ಯ ಎಸಗಿದ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 11-30 ರಿಂದ 12-45 ಗಂಟೆಯವರೆಗೆ ಮಾಡಿರುತ್ತೇನೆ. ಸಾಕ್ಷಿದಾರರು ಕೃತ್ಯ ಎಸಗಿದ ಪಂಚನಾಮೆ ವರದಿಯನ್ನು ನೋಡಿ ಗುರುತಿಸಿದ್ದು ನಿ ಪಿ 7 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ 06 ಛಾಯಾ ಚಿತ್ರವನ್ನು ನೋಡಿ ಗುರುತಿಸಿದ್ದು ಕ್ರಮವಾಗಿ ನಿ ಪಿ 8 ರಿಂದ 13 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 8(ಎ) ದಿಂದ 13(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪೋಲಿಸ್ ನೋಟಿಸ್ ನೋಡಿ ಗುರುತಿಸಿದ್ದು ನಿ ಪಿ 14 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 14(ಎ) ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ಮುದ್ದೆಮಾಲನ್ನು ಪಿ ಎಫ್ ನಂಬರ್ 43/2023 ರೀತ್ಯಾ ಮಾನ್ಯ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಪಿ ಎಫ್ ನ್ನು ನಿ ಪಿ 15 ಎಂದು, ಸಾಕ್ಷಿದಾರರ ಸಹಿಯನ್ನು ನಿ ಪಿ 15(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನಾಂಕದಂದು ಸಾಕ್ಷಿದಾರರಾದ ಚಾಸಾ-1, 6 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯನ್ನು ಮಾನ್ಯ ಸರ್ವೊಚ್ಚ ನ್ಯಾಯಾಲಯದ ನಿಯಮನುಸಾರ ಆರೋಪಿ ವಿರುದ್ದ ದಸ್ತಗಿರಿ ನಿಯಮ ಪಾಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂದನಕ್ಕೆ ಒಪ್ಪಿಸಿರುತ್ತೇನೆ. ಸಾಕ್ಷಿದಾರರು ಮುದ್ದೆಮಾಲು ನೋಡಿ ಗುರುತಿಸಿದ್ದು ಈಗಾಗಲೇ ಎಮ್ ಓ 1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲು: ಶ್ರೀ ಜಿ.ಪಿ. ವಕೀಲರಿಂದ:-**

1. ಪಂಚನಾಮೆ ಮಾಡಲು ಗುನ್ಹಾ ಸ್ಥಳಕ್ಕೆ ಮಧ್ಯಾಹ್ನ 2-30 ಗಂಟೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ರೈಟರ್ ಬಸವರಾಜ, ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರು ಮತ್ತು ದೂರುದಾರರಾದ ಚಾಸಾ-1 ರವರು ಇದ್ದರು. ಇವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ದೂರು ಕೊಡಲು ಚಾಸಾ-1 ಮತ್ತು 7 ರವರು ಬಂದಿರುತ್ತಾರೆ. 2 ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ. ದೂರನ್ನು ಕನ್ನಡದಲ್ಲಿ ಗಣಕೀಕರಣ ಮಾಡಿರುತ್ತಾರೆ. ಆರೋಪಿತನು ಹಾಸ್ಟೇಲ್ ನ ಮುಖ್ಯ ದ್ವಾರದ ಕೀಲಿಪತ್ತವನ್ನು ಮತ್ತು ಅಡಿಗೆ ಕೋಣೆಯ ಬಾಗಿಲಿಗೆ ಹಾಕಿದ ಎರಡು ಕೀಲಿ ಪತ್ತ ಗಳನ್ನು ಮುರಿದಿರುತ್ತಾನೆ. ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಅಲ್ಲಿ ಪತ್ತಗಳು ಇರಲಿಲ್ಲ. ನಾನು ಚಾಸಾ-1 ಮತ್ತು 7 ರವರಿಗೆ ವಿಚಾರಣೆ ಮಾಡಿರುತ್ತೇನೆ. ಅವರು ಪತ್ತ ಅಲ್ಲಿ ಇರಲಿಲ್ಲ ಎಂದು ತಿಳಿಸಿರುತ್ತಾರೆ. ಗುನ್ನೆ ನಂಬರ್ 43/2023 ಮತ್ತು ಗುನ್ನೆ 44/2023 ರ ಕೃತ್ಯ ಸ್ಥಳಗಳು ಬೇರೆ ಬೇರೆಯಾಗಿರುತ್ತವೆ ಆದರೆ ನಾನು ರನ್ನಿಂಗ್ ಪಂಚನಾಮೆ ಮಾಡಿರುತ್ತೇನೆ. ಎರಡು ಕೃತ್ಯ ಸ್ಥಳದ ಛಾಯಾ ಚಿತ್ರಗಳನ್ನು ತೆಗೆಸಿರುತ್ತೇನೆ.

2. ಕೃತ್ಯವು ದಿನಾಂಕ: 03-03-2023 ರಂದು ನಡೆದಿದ್ದು, ದಿನಾಂಕ: 08-03-2023 ರಂದು ಆರೋಪಿ ಸಿಕ್ಕಿಬಿದ್ದಿರುತ್ತಾನೆ ಈ ನಡುವೆ ನಾನು ಮತ್ತು ಸಿಬ್ಬಂದಿಯವರು ಆರೋಪಿ ಪತ್ತೆಗಾಗಿ ಕ್ರಮ ತೆಗೆದುಕೊಂಡಿರುತ್ತೇವೆ. ಕಬ್ಬಿಣದ ರಾಡು ಒಂದು ಕಡೆ ಚೂಪಾಗಿದ್ದು ಇನ್ನೊಂದು ಕಡೆ ಯು ಆಕಾರದಲ್ಲಿದ್ದು ಎರಡು ಫೀಟ್ ಉದ್ದ ಇರುತ್ತದೆ. ದಿನಾಂಕ: 08-03-2023 ರಂದು ಬೆಳಿಗ್ಗೆ 10-15 ರಿಂದ 11-00 ಗಂಟೆಯವರೆಗೆ ಕೃತ್ಯಕ್ಕೆ ಬಳಿಸಿದ ಕಬ್ಬಿಣದ ರಾಡಿನ ಪಂಚನಾಮೆ ಪೋಲಿಸ್ ಠಾಣೆಯಲ್ಲಿ ಮಾಡಿದ್ದೇನೆಂದು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-2 ರಿಂದ 5 ರವರು ನಿಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಆರೋಪಿತನ ಸ್ವ ಖುಷಿ ಹೇಳಿಕೆ ಪಡೆದುಕೊಂಡಿದ್ದೇನೆಂದು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತನು ಕೃತ್ಯ ಸ್ಥಳ ತೋರಿಸುತ್ತೇನೆಂದು ಕರೆದುಕೊಂಡು ಹೋದನು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ವಸ್ತು ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ರಂತಿರುವ ಕಬ್ಬಿಣದ ರಾಡು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗಬಹುದು. ಫಿರ್ಯಾದಿದಾರರಿಗೆ ಸಹಾಯ ಮಾಡಲು ಸುಳ್ಳು ದೂರು ಸ್ವೀಕರಿಸಿದ್ದೀರಿ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳು ಇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಇ ಒ
**ಸಹಿ/–**

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ದೇವದುರ್ಗ